**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 2073/2025**

**ಫಿರ್ಯಾದುದಾರರು** ವ್ಯವಸಾಯ ಸೇವಾ ಸಹಕಾರಿ ಸಂಘ ನಿಯಮಿತ ಲಿ., ಭಟ್ಕಳ
ಮುಟ್ಟಳ್ಳಿ ಶಾಖೆ, ಪ್ರತಿನಿಧಿಸುವವರು,
ಇದರ ಸಾಲ ವಸೂಲಾಧಿಕಾರಿ ,
ಶ್ರೀ ಗಜಾನನ ತಂದೆಃ ಕೃಷ್ಣ ನಾಯ್ಕ ,

**– ವಿರುದ್ಧ –**

**ಆರೋಪಿತರು** ಶ್ರೀಮತಿ ಧನಲಕ್ಷ್ಮಿ ಮಂಜುನಾಥ ನಾಯ್ಕ,
ವಯಸ್ಸುಃ 34 ವರ್ಷ
ಸಾಃ ನಂ.123, ರೈಲ್ವೇ ಸ್ಟೇಷನ್ ಹತ್ತಿರ,
ಮುಟ್ಟಳ್ಳಿ, ಭಟ್ಕಳ ತಾಲೂಕು.

**ಆಪಾದನೆ**

ಆರೋಪಿಯಾದ ನೀವು ದಿನಾಂಕಃ 15-09-2022 ರಂದು ಪಿರ್ಯಾದಿ ಸಂಸ್ಥೆಯಿಂದ ರೂ.15,00,000/- (ರೂಪಾಯಿ ಐದನ್ಯೆದು ಲಕ್ಷ ಮಾತ್ರ) ಹಣವನ್ನು ಅಡಮಾನ ಸಾಲವಾಗಿ ಶೇಕಡಾ 14% ಬಡ್ಡಿ ಮತ್ತು 2% ಶೇಕಡಾ ದಂಡದ ಬಡ್ಡಿ ದರದಲ್ಲಿ ಸಾಲದ ಖಾತೆ ಸಂಖ್ಯೆ: ML-15 ರಲ್ಲಿ ಪಡೆದುಕೊಂಡಿದ್ದು ಇರುತ್ತದೆ. ಸ್ದ್ರಿ ಸಾಲಕ್ಕೆ ಸಂಬಂಧಪಟ್ಟಂತೆ ಕೆಲವು ಕಾಗದ ಪತ್ರಗಳನ್ನು ಬರೆದು ಕೊಟ್ಟಿದ್ದು ಇರುತ್ತದೆ. ಆದರೆ ನೀವು ಒಪ್ಪಿಕೊಂಡಂತೆ ಸಾಲವನ್ನು ಅವಧಿಯೊಳಗೆ ಮರುಪಾವತಿ ಮಾಡಿದ್ದು ಇರುವುದಿಲ್ಲ. ದಿನಾಂಕಃ 15-05-2025 ರ ತನಕ ಅಸಲು ಹಾಗೂ ಬಡ್ಡಿ ಸೇರಿ ರೂ. 17,02,689/- (ರೂಪಾಯಿ ಹದಿನೇಳು ಲಕ್ಷದ ಎರಡು ಸಾವಿರದ ಆರು ನೂರು ಎಂಭತೊಂಭತ್ತು ಮಾತ್ರ) ಬಾಕಿ ಇರುತ್ತದೆ. ನಂತರ ಪಿರ್ಯಾದಿಯವರು ಸ್ದ್ರಿ ಸಾಲದ ಹಣವನ್ನು ಮರುಪಾವತಿ ಮಾಡುವಂತೆ ನಿಮ್ಮನ್ನು ಕೇಳಿಕೊಂಡಾಗ, ಸ್ದ್ರಿ ಸಾಲದ ಹಣವನ್ನು ಮರು ಪಾವತಿಸುವ ಸಲುವಾಗಿ ನೀವು ಕರ್ನಾಟಕ ಬ್ಯಾಂಕ್ ಲಿ., ಭಟ್ಕಳ ಶಾಖೆಯ ಚೆಕ್ ನಂಬರ್ 623128 ನ್ನು ರೂ. 17,02,689/- (ರೂಪಾಯಿ ಹದಿನೇಳು ಲಕ್ಷದ ಎರಡು ಸಾವಿರದ ಆರು ನೂರು ಎಂಭತೊಂಭತ್ತು ಮಾತ್ರ) ಕ್ಕೆ ದಿನಾಂಕಃ 15-05-2025 ಎಂದು ನಮೂದಿಸಿ ಫಿರ್ಯಾದಿದಾರರಿಗೆ ನೀಡಿರುತ್ತೀರಿ. ಸ್ದ್ರಿ ಚೆಕ್ಕನ್ನು ಫಿರ್ಯಾದಿ ಸಂಸ್ಥೆಯವರು ಅವರ ವ್ಯವಹಾರದ ಬ್ಯಾಂಕಾದ ದಿ. ಭಟ್ಕಳ ಅರ್ಬನ್

ಕೋ–ಆಪ್ ಬ್ಯಾಂಕ್ ಲಿ., ಭಟ್ಕಳ ಬಜಾರ್ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ, "Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 29–05–2025 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 13–06–2025 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ನೋಂದಾಯಿತ ಅಂಚೆ ದ್ವಾರದ ಮುಖಾಂತರ ನಿಮಗೆ ಕಳುಹಿಸಿದ್ದು, ಸದ್ರಿ ನೋಟಿಸು ಮುಟ್ಟಿದ 15 ದಿವಸದೊಳಗಡೆ ಚೆಕ್ಕನಲ್ಲಿ ನಮೂದಿಸಿದ ಹಣವನ್ನು ನೀಡುವಂತೆ ಸೂಚಿಸಿದ್ದು ಇರುತ್ತದೆ, ಸದ್ರಿ ನೋಟಿಸ್ಸನ್ನು ನೀವು ಸ್ವೀಕರಿಸದೇ ದಿನಾಂಕಃ 21–06–2025 ರಂದು Unclaimed ಎಂದು ವಾಪಸ್ಸು ಬಂದಿರುತ್ತದೆ. ಆದರೆ ನೀವು ಇಂದಿನವರೆಗೂ ಸಹ ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್ ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ಸಹಿ ಇದೆ/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 10–12–2025.

ನ್ಯಾಯಿಕ ದಂಡಾಧಿಕಾರಿ, ಭಟ್ಕಳ.